**ರಾಜ್ಯದಲ್ಲಿ ಸ್ವಚ್ಛ ಗ್ರಾಮ ನಿರ್ಮಾಣ ಯೋಜನೆ**

4644 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸ್ವಚ್ಛಗ್ರಾಮ ನಿರ್ಮಾಣ ಯೋಜನೆಯಡಿಯಲ್ಲಿ ಆಯ್ಕೆ ಮಾಡಲಾದ ಗ್ರಾಮಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)*

ಆ) *ಈ ಸ್ವಚ್ಛಗ್ರಾಮ ಯೋಜನೆಯನ್ನು ಕೈಗೊಳ್ಳುವಲ್ಲಿ ಸರ್ಕಾರದವರು ಯಾವ ಯಾವ ಸಹಾಯಧನವನ್ನು ಮಾಡಿರುವರು?*

ಇ) *ಈಗಾಗಲೇ ಸ್ವಚ್ಛಗ್ರಾಮ ಕೈಗೊಂಡಿರುವ ಗ್ರಾಮಗಳು ಯಾವ ಹಂತದಲ್ಲಿ ಇರುವುವು?*

ಶ್ರೀ ಎಂ. ದಿವಾಕರ ಬಾಬು (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು) :

ಅ) ಸ್ವಚ್ಛಗ್ರಾಮ ಯೋಜನೆಯಡಿ ಗ್ರಾಮಗಳನ್ನು ಇನ್ನೂ ಆಯ್ಕೆ ಮಾಡಬೇಕಾಗಿದೆ. ಯೋಜನಾ ವೆಚ್ಚದ ಶೇಕಡ 10ರಷ್ಟು ಹಣವನ್ನು ವಂತಿಗೆಯಾಗಿ ನೀಡಲು ಮುಂದೆ ಬರುವಂತಹ 1000 ಗ್ರಾಮಗಳನ್ನು ಆಯ್ಕೆ ಮಾಡಿ, ಅಂತಹ ಗ್ರಾಮಗಳಲ್ಲಿ ಮಾತ್ರ ಸ್ವಚ್ಛಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

ಆ) ಸ್ವಚ್ಛಗ್ರಾಮ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದಿಂದ ಶೇಕಡ 90ರಷ್ಟು ಹಣವನ್ನು ಹುಡ್ಕೊ ಸಂಸ್ಥೆಯ ನೆರವಿನಿಂದ ಒದಗಿಸಲಾಗುವುದು. ಸುಮಾರು 500 ಮನೆಗಳಿರುವ ಒಂದು ಗ್ರಾಮದ ಸಂಪೂರ್ಣ ನೈರ್ಮಲೀಕರಣಕ್ಕಾಗಿ ಸರಾಸರಿ ರೂ. 20.00 ಲಕ್ಷ ವೆಚ್ಚವಾಗಬಹುದಾಗಿ ಅಂದಾಜು ಮಾಡಲಾಗಿದ್ದು, ಈ ಪೈಕಿ, ರೂ. 18.00 ಲಕ್ಷಗಳನ್ನು ಸರ್ಕಾರದಿಂದ ಒದಗಿಸಲಾಗುವುದು.

ಇ) ಸ್ವಚ್ಛಗ್ರಾಮ ಯೋಜನೆಯನ್ನು ದಿ. 20-10-2000 ರಂದು ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕಿನ ಮಂಚನಬೆಲೆ ಗ್ರಾಮದಲ್ಲಿ ಔಪಚಾರಿಕವಾಗಿ ಪ್ರಾರಂಭಿಸಲಾಗಿದೆ.

**ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭಿಸುವುದು**

4645 - ಶ್ರೀ ಕೌಜಲಗಿ ಮಹಾಂತ ಶಿವಾನಂದ (ಬೈಲಹೊಂಗಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸರ್ಕಾರಿ ಪದವಿ ಕಾಲೇಜು (ಆರ್ಟ್ಸ್ ಮತ್ತು ಕಾಮರ್ಸ್) ಪ್ರಾರಂಭಿಸಲು ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳು ಆದೇಶಿಸಿರುವುದು ನಿಜವೇ?*